



ಲೋಕದಲ್ಲಿ ರೆಡಿಮೇಡ್ ಬ್ಲೌಸ್‌ಗಳು ತರಾವರಿ ಬಣ್ಣ ವಿನ್ಯಾಸದಲ್ಲಿ ದೊರೆಯುತ್ತವೆ.

## ರಂಗಿನ ರವಿಕೆಗಳ ಕಥೆ

ಹಿಂದೆಲ್ಲ ಸೀರೆಗಳಿಗೆ ಹೊಂದುವ ಬಣ್ಣದ ರವಿಕೆಯೇ ತೊಡಬೇಕು ಎಂದು ನಿಯಮವಿರಲಿಲ್ಲ. ಬಿಳಿ, ಕಪ್ಪು, ಕೆಂಪು, ನೀಲಿ, ಹಸಿರು ಬಣ್ಣದ ರವಿಕೆಗಳನ್ನು ಎಲ್ಲಾ ಬಣ್ಣದ ಸೀರೆಗಳೊಂದಿಗೆ ಹೊಂದಿಸಿಕೊಂಡು ಕೊಡುತ್ತಿದ್ದರು. ಕಾಲ ಬದಲಾದಂತೆ ಫ್ಯಾಷನ್ ದುನಿಯಾದಲ್ಲಿ ಕೂಡಾ ವಿನ್ಯಾಸಗಳ ಮಹಾಕ್ರಾಂತಿ ಆರಂಭವಾಯಿತು. ಅಲ್ಲಿಂದ ಶುರುವಾದ ವೆರೈಟಿ ಕುಪ್ಪಸಗಳ ದಿಬ್ಬಣ ಇಂದಿಗೂ ರಂಗು ರಂಗಿನ ರವಿಕೆಗಳ ಮೆರವಣಿಗೆ ನಿರಂತರ ಮುಂದುವರೆದಿದೆ.

ಡಿಸೈನರ್ ಬ್ಲೌಸುಗಳ ಕಾರುಬಾರು ಇಂದು ಹೆಚ್ಚಿದೆ. ಫ್ಯಾಷನ್ ಲೋಕದಲ್ಲಿ ಆಗುತ್ತಿರುವ ಬದಲಾವಣೆಗಳಿಗೆ ತಕ್ಕಂತೆ ಕುಪ್ಪಸದ ಫ್ಯಾಷನ್ ಕೂಡ ನವೀಕರಣಗೊಂಡಿದೆ. ಪಫ್‌ತೋಳು, ಉದ್ದನೆಯ ತೋಳು, ಕ್ಯಾಪ್ ಸ್ಲೀವ್, ಬೆಲ್ ಸ್ಲೀವ್, ರಫಲ್ಸ್ ಸ್ಲೀವ್, ಎಂಬ್ರಾಯ್ಡರಿ ಸ್ಲೀವ್, ಚಿನ್ನದ ಕೂಸಿನ ತೋಳು ಹೀಗೆ.. ವೆರೈಟಿಗಳಲ್ಲಿ ಡಿಸೈನರ್ ರವಿಕೆಗಳ ದೊಡ್ಡ ಜರತಾರಿ ಸೀರೆಗಳು ನಾಚುವಂತೆ ರೂಪುಗೊಂಡಿವೆ.
ಡಿಸೈನರ್ ರವಿಕೆಗಳ ಬೇಡಿಕೆ ಗಗನಕ್ಕೇರಿದೆ ಈಗಂತೂ ಕುಪ್ಪಸದ ಬದಲಿಸಲು ಸಾಮಾನ್ಯ ದರ್ಜಿಯ ಹತ್ತಿರ ಹೋಗುವ ಬದಲು ಬ್ರಾಂಡೆಡ್ ಡಿಸೈನರ್‌ಗಳ ಬಳಿ ಜನಜಂಗುಳಿ ಹೆಚ್ಚಿದೆ. ಕಾಸಿಗೆ ತಕ್ಕ ಡಿಸೈನ್ ನಿಮ್ಮದಾಗುತ್ತದೆ.

## ಮದುವೆಯ ಸಂಭ್ರಮಕ್ಕೆ ಬ್ಲೌಸ್‌ಗಳು

ಮದುವೆಗೆ ಗಂಡು ಸಿಗುವ ಮುಂಚೆಯೇ ರವಿಕೆಗಳನ್ನು ಹೊಲಿಯಲು ಕೊಡುವ ಕಾಲ ಬಂದಿದೆ. ಈಗಂತೂ ಸುಲಭವಾಗಿ ಗಂಡು ಸಿಗಬಹುದೇನೋ ಮದುವೆಯ ಬ್ಲೌಸ್ ಸಮಯಕ್ಕೆ ಸರಿಯಾಗಿ ಹೊಲಿದು ಕೊಡುವವರು ದೊರೆಯುವುದು ಕಷ್ಟವಾಗಿದೆ. ಇದಕ್ಕೆ ಉಪಾಯ ಎಂಬಂತೆ ರೆಡಿಮೇಡ್ ಬ್ರೈಡಲ್ ರವಿಕೆಗಳು ಮಾರುಕಟ್ಟೆಗೆ ದಾಳಿ ಮಾಡಿವೆ. ಅದ್ಭುತವೆನ್ನಿಸುವ ವಿನ್ಯಾಸದ ಕುಪ್ಪಸ ಲಭ್ಯವಿದೆ. ಹರಳು ಮತ್ತು ರತ್ನಗಳ ಎಂಬ್ರಾಯ್ಡರಿ ರವಿಕೆಗಳಿಗೂ ಬೇಡಿಕೆ ಹೆಚ್ಚಿದೆ. ಗಂಡು–ಹೆಣ್ಣಿನ ಚಿತ್ರಣವಿರುವ ಎಂಬ್ರಾಯ್ಡರಿ ರವಿಕೆ, ಮದುವೆ ದಿಬ್ಬಣದ ಎಂಬ್ರಾಯ್ಡರಿ, ಕಳಸ, ಕಮಲ ಹೀಗೆ... ಮದುವೆಯ ಸಾಂಪ್ರದಾಯಿಕ ಡಿಸೈನರ್ ಬ್ಲೌಸುಗಳಲ್ಲಿ ಮದುಮಕ್ಕಳು ಮಿರ ಮಿರ ಮಿಂಚುತ್ತಿರುತ್ತಾರೆ.

## ವಿಭಿನ್ನ ವಿನ್ಯಾಸಗಳು

ಸಾಮಾನ್ಯವಾಗಿ ರವಿಕೆಗಳನ್ನು ಮುತ್ತು ರತ್ನ ಹರಳಿನ ಎಂಬ್ರಾಯ್ಡರಿಗಳಿಂದ ಸಿಂಗರಿಸುವುದು, ಕುಚ್ಚು ಮತ್ತು ಹರಳಿನ ಆಭರಣಗಳನ್ನು ಇಟ್ಟು ಹೊಲಿಯುವುದು ನೋಡಿರುತ್ತೀರಿ. ಆದರೆ ಇದೆಲ್ಲದಕ್ಕೂ ವಿಭಿನ್ನ ಎಂಬಂತೆ ಮಹಿಳೆಯರ ರವಿಕೆಯ ಬೆನ್ನ ಮೇಲೆ ದೇವಾನುದೇವತೆಗಳೇ ನಲಿದಾಡುತ್ತಿದ್ದಾರೆ. ಬೆನ್ನ ಮೇಲೆ ರವಿಕೆಯ ಕೈ ತೋಳುಗಳ ಮೇಲೆ ಲಕ್ಷ್ಮೀ ವೆಂಕಟೇಶ್ವರ, ಕೃಷ್ಣ, ಗಣಪ, ಶಿವ ಪಾರ್ವತಿ, ಅಲಮೇಲಮ್ಮ, ಸರಸ್ವತಿ–ದೇವಿಯ ಚಿತ್ರಗಳು ರವಿಕೆಯ ಬೆನ್ನೇರಿದ್ದಾರೆ ವಿಶೇಷ ಅಂದರೆ ಹಬ್ಬಕ್ಕೆ ತಕ್ಕಂತೆ ದೇವರ ಚಿತ್ರವಿರುವ ಎಂಬ್ರಾಯ್ಡರಿ. ಡಿಸೈನರ್ ಬ್ಲೌಸ್‌ಗಳು ಮಾರುಕಟ್ಟೆಯಲ್ಲಿ ಬಾರಿ ಬೇಡಿಕೆ ಗಿಟ್ಟಿಸಿಕೊಂಡಿವೆ.

ಲಕ್ಷ್ಮೀಕಾಸಿನ ಒಡವೆಗಳು ಹಿಂದಿನಿಂದಲೂ ಮಹಿಳೆಯರ ಫೇವರೆಟ್ ಆಗಿವೆ. ಈಗ ಇದೇ ಲಕ್ಷ್ಮೀ ಕಾಸನ್ನು ಸೀರೆಯ ರವಿಕೆಗಳ ಮೇಲೆ ಪೋಣಿಸಿ ಹೊಲಿಯಲಾಗುತ್ತಿದೆ. 2018ರ ಲೇಟೆಸ್ಟ್ ಟ್ರೇಡ್ ಕಲೆಕ್ಷನ್ ಆಗಿರುವ ಲಕ್ಷ್ಮೀಕಾಸಿನ ಡಿಸೈನರ್ ಬ್ಲೌಸ್ ಈ ಬಾರಿಯ ಶ್ರಾವಣ, ಕಾರ್ತೀಕ ಮಾಸದ ಹಬ್ಬಗಳಿಗೆ ವಿಶೇಷ ಮೆರುಗು ಸಂಭ್ರಮ ನೀಡಿತ್ತು. ಕುಪ್ಪಸದ ತೋಳು, ಬೆನ್ನಿನ ಹಿಂಬದಿ, ಕತ್ತು ಸುತ್ತಲೂ ಈ ಲಕ್ಷ್ಮೀ ಎಂಬ್ರಾಯ್ಡರಿ ರವಿಕೆಗಳು ಮಾರುಕಟ್ಟೆಯಲ್ಲಿ ಲಭ್ಯವಿದೆ. ನೋಡಲು ಬಹಳ ಕಲರ್‌ಫುಲ್ ಹಾಗೂ ಚಿತ್ತಾಕರ್ಷಕ ಕಾಣುವ ಗಣಪನ ಚಿತ್ರವಿರುವ ಎಂಬ್ರಾಯ್ಡರಿ ರವಿಕೆಗಳು ಈ ಬಾರಿಯ ಗಣೇಶ ಚತುರ್ಥಿಯ ಸಮಯದಲ್ಲಿ ಬಹಳ ಮಿಂಚಿತ್ತು.